ಅಲ್ಲಿಯೇ ಸಿಗುವಾ ಅನ್ನುತ್ತಾನೆ. ಹಾಗೆ ಹೇಳುವಾಗ ಆಯಾಸವಾದದ್ದನ್ನು ತೋರಿಸಿಕೊಳ್ಳಲು ಸಶಬ್ದವಾಗಿ ಆಕಳಿಸುತ್ತ, 'ಬೆಳಗಿನಿಂದ ರಿಕ್ಷಾ ಓಡಿಸಿ ಸಾಕಾಗಿ ಹೋಗಿದೆ ಸುರೇಶಣ್ಣ. ನಾಳೆ ಬೆಳಿಗ್ಗೆ ಫೋನ್ ಮಾಡ್ತೇನೆ' ಎಂದು ಎಳೆದೆಳೆದು ಹೇಳುತ್ತ ಕರೆ ಕಟ್ ಮಾಡುತ್ತಾನೆ. ಅವನ ಆಯಾಸ ಅರ್ಥವಾದವರು ಇಲ್ಲವೆಂದು ಹೇಳುವಂತೆಯೇ ಇಲ್ಲ. ಅಂದಂದು ಭೇಟಿಯಾಗದಿದ್ದರೆ ಆ ದಿನದ ಬಾಡಿಗೆ ದುಡ್ಡನ್ನು ಮರುದಿನವೇ ಸುರೇಶನಿಗೆ ಹೇಗಾದರೂ ತಲುಪಿಸುತ್ತಿದ್ದ. ಸುರೇಶ ಹೋಗುವ ಸರ್ವಿಸ್ ರೂಟಿನಲ್ಲಿ ಸಿಕ್ಕಿಯೋ, ಕೆಲವೊಮ್ಮೆ ಅವನ ಹೆಂಡತಿ ನೂರುನ್ನೀಸಾಳ ಕೈಯಲ್ಲಿಯೊ ಕಳುಹಿಸುತ್ತಿದ್ದ. ಅವಳು ಬೀಡಿ ಬ್ರ್ಯಾಂಚಿಗೆ ಬರುವಾಗ ದುಡ್ಡು ತಂದು ಕುಸುಮಳಿಗೆ ಕೊಡುತ್ತಿದ್ದಳು. ಬಾಡಿಗೆ ದುಡ್ಡು ಜಾಸ್ತಿ ಜಾಸ್ತಿ ಬರುತ್ತಿರುವುದು ಸುರೇಶನಿಗೆ ಖುಷಿ ನೀಡಿದರೂ 'ರಾಜ' ರಾತ್ರಿ ಮನೆಗೆ ಬರದಿದ್ದರೆ ಚಡಪಡಿಕೆ. ತನ್ನ ಆರ್ಥಿಕತೆ ಬಲವಾಗಲು ಕೈತಾಂಗಿನಂತಿದ್ದ ರಾಜನನ್ನು ಮಲಗುವ ಮೊದಲೊಮ್ಮೆ ಕಣ್ತುಂಬ ನೋಡಿ, ಮನೆಯಿಂದ ಫರ್ಲಾಂಗು ದೂರದಲ್ಲಿರುವ ಕಾರಣೀಕದ ಭಗವತಿಯನ್ನು ನೆನೆದು; ರಾಜನ ಬೆನ್ನಿಗೊಂದು ತಟ್ಟಿದರೇ ಸಮಾಧಾನ. ಬೆಳಗಾಗೆದ್ದು ರಾಜನ ಮೈ ತೊಳೆದು ಮೂಲೆ ಮೂಲೆಯನ್ನೂ ಬೈರಾಸಿನಲ್ಲಿ ಚೆನ್ನಾಗಿ ಒರೆಸಿದರೇ ತೃಪ್ತಿ. ಅಷ್ಟು ಮಾಡಿ ಕುಸುಮ ಕೊಟ್ಟ ಚಹ ತಿಂಡಿ ಮುಗಿಸಿ ಸರ್ವಿಸ್ ಬಸ್ಸಿನಲ್ಲಿ ಹೋಗಿ ಶೇಣಿ ಸ್ಟಾಪ್‌ನಲ್ಲಿಳಿದು; ಅಲ್ಲಿಂದ ಒಂದು ಮಾರು ನಡೆದು ಧಣಿ ಅಡ್ಲಿಚ್ಚನ ಮನೆಗೆ ಹೋಗಿ ಬಸ್ ಹತ್ತಿ ಡ್ರೈವಿಂಗ್ ಸೀಟಲ್ಲಿ ಕುಳಿತು ಭಗವತಿಯನ್ನೊಮ್ಮೆ; ಸೀಮೆ ದೇವರು ಪಾರ್ಥಸಾರಥಿಯನ್ನೊಮ್ಮೆ ನೆನೆದು ಸ್ಟೇರಿಂಗ್ ಹಿಡಿದರೆ ಅಂದಿನ ಸರ್ವಿಸ್ ನಿರ್ವಿಘ್ನವಾಗಿ ಸುರುವಾದಂತೆಯೇ. ಕ್ಲೀನರ್ ನಸೀರನ ಮನೆ ಫಕೀರಿಚ್ಚನ ಮನೆಯ ಹತ್ತಿರವಿರುವುದರಿಂದ ಅವನಾಗಲೇ ಬಂದಿರುತ್ತಾನೆ. ವಾರದಲ್ಲೆರಡು ದಿನ ಸುರೇಶ ಬೆಳಗ್ಗೆ ಐದುಗಂಟೆಗೆದ್ದು ವಿಲಿಯಂ ಮೇಸ್ತ್ರಿಯ ಹೊಯ್ಗೆ ಸಾಗಿಸುವ ಲಾರಿಯ ಡ್ರೈವರ್ ಆಗಿ ಹೋಗುತ್ತಿದ್ದ. ಹಾಗೆ ಹೋದರೂ ಏಳುವರೆಗೆ ನಿತ್ಯದ ಸರ್ವಿಸಿಗೆ ಹಾಜರಾಗುತ್ತಿದ್ದ. ಮೂಸಾನ ಪರಿಚಯ ಗೆಳೆತನಕ್ಕೆ ತಿರುಗಿದ್ದು ಅಲ್ಲಿಯೇ. ಮೂಸಾ ಡ್ರೈವಿಂಗಿನಲ್ಲಿ ಇವನಿಗಿಂತಲೂ ಒಂದು ಕೈ ಮೇಲು. ಹೊಳೆಯಿಂದ ಹೊಯ್ಗೆ ತೆಗೆಯಬಾರದೆಂಬ ಕಾನೂನು ಬಲವಾಗಿದ್ದಿದ್ದರಿಂದ ಹೊಯ್ಗೆ ಲಾರಿಯಲ್ಲಿ ಹೋಗುವುದೆಂದರೆ ಜೀವ ಕೈಯಲ್ಲಿ ಹಿಡಿದು ಹೋದಂತೆಯೇ. ಪೊಲೀಸರಿಗೆ

**ಸುರೇಶ ಬ್ಯಾಂಕಿನಿಂದ ಸಾಲ ತೆಗೆದು ರಿಕ್ಷಾ ಖರೀದಿಸಿ ಅದಕ್ಕೆ 'ರಾಜ'ನೆಂಬ ಹೆಸರು ಬರೆಸಿ ಮೂಸಾನ ಕೈಗೆ ಕೊಟ್ಟಿದ್ದ. ವಾರದಲ್ಲಿ ಐದು ದಿನ 'ರಾಜ' ದುಡಿಯುತ್ತಿದ್ದ. ಮೂಸಾ ಹಣದ ಲೆಕ್ಕಾಚಾರದಲ್ಲಿ ಕಟ್ಟುನಿಟ್ಟು. ಮೊದಲ ದಿನದಿಂದಲೇ ರಾತ್ರಿ ಹತ್ತು ಗಂಟೆಯೊಳಗೆ ರಾಜನನ್ನು ಸುರೇಶನ ಮನೆಗೆ ತಂದು ನಿಲ್ಲಿಸಿ, ಕಿಸೆಯಲ್ಲಿ ಸಂಗ್ರಹವಾಗಿದ್ದ ದುಡ್ಡನ್ನೆಲ್ಲ ಸುರೇಶನ ಕೈಯಲ್ಲಿಟ್ಟು; ತನ್ನ ಸಂಬಳವನ್ನೂ ಅಂದಂದೇ ಪಡೆಯುತ್ತಿದ್ದ.**